

ವೈರಸ್‌ಗಳು ಮನುಷ್ಯನ ವಿರುದ್ಧ ಕೆಲಸ ಮಾಡುತ್ತವೆ ಮತ್ತು ಮಾರಣಾಂತಿಕವಾಗಿರುತ್ತವೆ.

ಪ್ಲಾಸ್ಟಿಕ್ ಮಾಲಿನ್ಯದಿಂದ ನಮ್ಮ ರಕ್ತಕ್ಕೂ ಪ್ರವೇಶಿಸಿರುವ ಮೈಕ್ರೊ ಪ್ಲಾಸ್ಟಿಕ್ ವೈರಸ್‌ಗಳ ಹೊಸ ನೆಲೆಗಳಾಗಿ ಬದಲಾಗಿರುವುದು ತಿಳಿದುಬಂದಿದೆ. ಮೈಕ್ರೊ ಪ್ಲಾಸ್ಟಿಕ್‌ನ ಮೇಲೆ ಕುಳಿತ ವೈರಸ್‌ಗಳು ಮೂರು ದಿನಕ್ಕಿಂತ ಹೆಚ್ಚು ಕಾಲ ಇರುತ್ತದೆ ಎಂದು ಅಮೆರಿಕದ ವಿಜ್ಞಾನಿ ರಿಚರ್ಡ್ ವಿಲಿಯಂ ಹೇಳಿದ್ದಾರೆ.

ಕಳೆದ ಆರು ಸಾವಿರ ವರ್ಷಗಳಿಂದ ಇನ್‌ಫ್ಲುಯೆಂಜ ಎಂಬ ಸೋಂಕು ಮನುಷ್ಯನನ್ನು ಕಾಡುತ್ತಿದೆ. ಅದು ನಿಗದಿತವಾಗಿ ಪುನರಾವರ್ತನೆಗೊಳ್ಳುತ್ತಲೇ ಇದೆ. 1918ರಲ್ಲಿ ಸ್ಪ್ಯಾನಿಶ್ ಫ್ಲೂ ಹರಡಿದಾಗ ಅದು ಬ್ಯಾಕ್ಟೀರಿಯಾದಿಂದ ಆಗಿರಬಹುದು ಎಂದು ಭಾವಿಸಲಾಗಿತ್ತು. ಆದರೆ 1931ರಲ್ಲಿ ಅಮೆರಿಕದ ಜೀವ ವಿಜ್ಞಾನಿ ರಿಚರ್ಡ್ ಶೋಪ್, ಅದು ವೈರಸ್‌ನಿಂದ ಬರುತ್ತದೆ ಎಂದು ಪತ್ತೆ ಮಾಡಿದ್ದ. ಅದು ಹೇಗೆ ಈ ರೋಗಾಣು ಇಷ್ಟು ಸಾವಿರ ವರ್ಷಗಳಿಂದ ಇದೆ? ಪ್ರಶ್ನೆ ಎದುರಾದಾಗ ಅದು ತ್ವರಿತವಾಗಿ ಮತ್ತು ನಿಯಮಿತವಾಗಿ ತನ್ನ ಸ್ವರೂಪ ಬದಲಾಯಿಸಿಕೊಳ್ಳುವುದೇ ಅದರ ಅಸ್ತಿತ್ವಕ್ಕೆ ಕಾರಣ ಎಂಬುದು ತಿಳಿದು ಬಂತು. ಮನುಷ್ಯನನ್ನು ಕಾಡುವ ಎಲ್ಲಾ ಫ್ಲೂ ವೈರಸ್‌ಗಳು ಒಂದೇ ತರನಾಗಿರುತ್ತವೆ; ಇವುಗಳ ವಿರುದ್ಧ ಹೋರಾಡುವ ಪ್ರತಿಕಾಯ ಮನುಷ್ಯನಲ್ಲಿ ಇರುವುದಿಲ್ಲ. ಪ್ರತಿ ವರ್ಷ ಮನುಷ್ಯನನ್ನು ಕಂಗೆಡಿಸುವ ವೈರಾಣುಗಳ ವಿರುದ್ಧ ಮನುಷ್ಯ ಇತ್ತೀಚೆಗೆ ಅಲ್ಪಸ್ವಲ್ಪ ಪ್ರತಿರೋಧ ತೋರಿಸುವ ಶಕ್ತಿ ಸಂಪಾದಿಸಿದ್ದಾನೆ. ಅಧ್ಯಯನದ ಪ್ರಕಾರ ಕಳೆದ ಒಂದು ದಶಕದಲ್ಲಿ ಫ್ಲೂ ಉಂಟುಮಾಡುವ ವೈರಸ್‌ಗಳ ಸಂಖ್ಯೆ ಭಾರಿ ವೇಗದಲ್ಲಿ ಹೆಚ್ಚುತ್ತಿದೆ. ಪ್ರತಿ ದಿನ 80 ಕೋಟಿ ವೈರಸ್‌ಗಳು ಭೂಮಿಯಿಂದ ಮೇಲೆ ಆಕಾಶಕ್ಕೆ ತೂರಲ್ಪಡುತ್ತವೆ ಮತ್ತು ಭೂಮಿಗೆ ಅವು ಹಿಂದಿರುಗಿ ಬಂದು ಬೀಳುತ್ತವೆ.

## ಕಂಟಕಪ್ರಾಯ ವೈರಸ್‌ಗಳು

ಭೂಮಿಯ ಮೇಲೆ ಮನುಷ್ಯ ಮನುಷ್ಯನ ಇರುವಿಕೆ ಪ್ರಾರಂಭವಾಗುವುದಕ್ಕಿಂತ ಮುಂಚಿನಿಂದಲೂ ನೆಲೆ ಕಂಡುಕೊಂಡಿರುವ ವೈರಸ್‌ಗಳು ಹಲವು ಸಲ ಮನುಷ್ಯನ ಅಸ್ತಿತ್ವವನ್ನೇ ಪ್ರಶ್ನೆ ಮಾಡುವಷ್ಟರಮಟ್ಟಿಗೆ ತೊಂದರೆ ನೀಡಿವೆ. ಕೋಟ್ಯಂತರ ಸಂಖ್ಯೆಯ ಜನರ ಪ್ರಾಣ ತೆಗಿದಿವೆ. ಇದುವರೆಗಿನ ಮಾನವ ಇತಿಹಾಸದಲ್ಲಿ ಈ ಕೆಳಗಿನ ಸೋಂಕುಗಳಿಂದ ಮನುಷ್ಯ ಪಡಬಾರದ ಕಷ್ಟಪಟ್ಟಿದ್ದಾನೆ. ಪಾಣಿ, ಪಕ್ಷಿ, ಸಸ್ಯ, ಮನುಷ್ಯ ಎನ್ನದೆ ಎಲ್ಲರ ಮೇಲೂ ತನ್ನ ಪ್ರಭಾವ ಪ್ರಕಟಿಸುವ ವೈರಸ್‌ಗಳು ಹಲವು ಬಾರಿ ಮಾರಣಾಂತಕವಾಗಿ ಬಿಡುತ್ತವೆ. ಇಂಥ ಕೆಲವು ವೈರಸ್‌ಗಳನ್ನು ಕೆಳಗಿನಂತೆ ಗುರ್ತಿಸಬಹುದು:

### 1. ಸಿಡುಬು

ನೂರಾರು ವರ್ಷಗಳಿಂದ ಮಾನವ ಜನಾಂಗವನ್ನು ಕಾಡುತ್ತಾ ಬಂದಿರುವ ಸಿಡುಬು ಕಳೆದ ಶತಮಾನದಲ್ಲಿ 30 ಕೋಟಿ ಜನರ ಪ್ರಾಣಹರಣ ಮಾಡಿದೆ ಎಂಬ ದಾಖಲೆ ಇದೆ. ಸೋಂಕು ತಗಲಿದ ಮೂವರಲ್ಲಿ ಒಬ್ಬರು ಮರಣಿಸುತ್ತಾರೆ.

1980ರಲ್ಲಿ 'ವಿಶ್ವಸ್ವಾಸ್ಥ್ಯ ಸಂಸ್ಥೆ'ಯು ಜಗತ್ತನ್ನು ಸಿಡುಬುಮುಕ್ತ ಎಂದು ಘೋಷಿಸಿತ್ತು. ಆದರೆ ಸಿಡುಬಿನ ಪ್ರಕರಣಗಳು ಇನ್ನೂ ವರದಿಯಾಗುತ್ತಲೇ ಇವೆ.

### 2. ಎಚ್‌ಐವಿ

1982ರಲ್ಲಿ ಪ್ರಪ್ರಥಮ ಬಾರಿಗೆ ಬೆಳಕಿಗೆ ಬಂದ ಅಕ್ವಾಯರ್ಡ್ ಇಮ್ಯೂನೊ ಡೆಫಿಶಿಯೆನ್ಸಿ ಸಿಂಡ್ರೋಮ್ ಉಂಟುಮಾಡುವ ಈ ವೈರಸ್ ಮನುಷ್ಯನಿಗೆ ಮಾರಣಾಂತಿಕ ಎಂದು ಈಗಾಗಲೇ ದೃಢಪಟ್ಟಿದೆ. ಕಾಯಿಲೆಯನ್ನು ಪೂರ್ತಿ ವಾಸಿ ಮಾಡಲಾಗದಿದ್ದರೂ ಚಿಕಿತ್ಸೆಯ ಮೂಲಕ ಸೋಂಕಿನ ಉಪಟಳವನ್ನು ತಡೆದುಕೊಂಡು ಜೀವನ ನಡೆಸಬಹುದಾಗಿದೆ.

ಭಾರತದಲ್ಲಿ ಈಗ 24 ಲಕ್ಷ ಏಡ್ಸ್ ರೋಗಿಗಳಿದ್ದಾರೆ ಎಂಬ ಮಾಹಿತಿ ಇದೆ. ದೇಶದಲ್ಲಿ ಪ್ರತಿ ಒಂದು ಲಕ್ಷ ಜನರಿಗೆ ಮೂವರು ಏಡ್ಸ್ ರೋಗದಿಂದ ಸಾವನ್ನಪ್ಪುತ್ತಾರೆ ಎಂಬ ಮಾಹಿತಿ ಇದೆ. ಸಂಶೋಧಕರು ಎಚ್‌ಐವಿ ಸೋಂಕು ರಕ್ತ, ಲೈಂಗಿಕ ಸಂಪರ್ಕ, ಎದೆಹಾಲು ಮತ್ತು ವೀರ್ಯದಿಂದ ಒಬ್ಬರಿಂದ ಒಬ್ಬರಿಗೆ ಪ್ರಸರಣಗೊಳ್ಳುತ್ತದೆ ಎಂದು ಪತ್ತೆ ಮಾಡಿದ್ದರು. 1982ರಲ್ಲಿ ಪತ್ತೆಯಾದ ಈ ವೈರಸ್ 1800ರ ಅವಧಿಯಲ್ಲಿ ಮಧ್ಯ ಆಫ್ರಿಕಾದ ಚಿಂಪಾಂಜಿಗಳಿಂದ ಮನುಷ್ಯರಿಗೆ ವರ್ಗಾವಣೆಗೊಂಡಿತ್ತು. ಚಿಂಪಾಂಜಿಗಳನ್ನು ಬೇಟೆಯಾಡಿ ಅವುಗಳ ಮಾಂಸ ಸೇವಿಸಿದ ಜನರಿಗೆ ವೈರಸ್ ಹಬ್ಬಿತ್ತು ಎಂಬ ಮಾಹಿತಿ ಇತ್ತು. 1981ರಲ್ಲಿ ಎಚ್‌ಐವಿಯು ಸಲಿಂಗ ಕಾಮದಲ್ಲಿ ನಿರತರಾದವರಲ್ಲಿ ಹೆಚ್ಚು ಬಾಧಿಸಿತ್ತು ಎಂಬ ವರದಿಯೊಂದು ಅಮೆರಿಕದಲ್ಲಿ ದೊಡ್ಡ ರಾದ್ಧಾಂತವನ್ನು ಸೃಷ್ಟಿಸಿತ್ತು.

ವಿಶ್ವಸ್ವಾಸ್ಥ್ಯ ಸಂಸ್ಥೆಯ ವರದಿಯಂತೆ ಸೋಂಕು ಶುರುವಾದಾಗಿನಿಂದ ಇಲ್ಲಿಯವರೆಗೆ 8.4 ಕೋಟಿ ಜನ ಸೋಂಕಿಗೆ ಒಳಗಾಗಿದ್ದು, ನಾಲ್ಕು ಕೋಟಿ ಜನ ಪ್ರಾಣ ತ್ಯಜಿಸಿದ್ದಾರೆ. 2021ರ ಅಂತ್ಯಕ್ಕೆ ವಿಶ್ವದಲ್ಲಿ 3.84 ಕೋಟಿ ಜನ ಎಚ್‌ಐವಿ ಸೋಂಕಿತರು ಇದ್ದರು ಎಂಬ ಮಾಹಿತಿ ಇದೆ.

### 3. ಎಬೋಲಾ ವೈರಸ್

ಆಫ್ರಿಕಾದ ವಿವಿಧ ಭಾಗಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವ ಎಬೋಲಾ ವೈರಸ್ 1976ರಲ್ಲಿ ಪತ್ತೆಯಾಗಿತ್ತು. ಎಬೋಲಾ ಕಾಯಿಲೆಯು